
ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ



ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೫ | ನವೆಂಬರ್ ೨೦೧೫ | ಸಂಚಿಕೆ ೧




TEACHINGS OF LIFE

## ಅರ್ಥಮಾಡಿಕೊಳ್ಳುವುದಕ್ಕೆ ಸಾತತ್ಯ, ನಿರಂತರತೆ, ಮುಂದುವರಿಕೆ ಇಲ್ಲ.

ಪ್ರತಿಯೊಂದು ಪ್ರಾರ್ಥನೆಯೂ ಯಾಚನೆ. ಸ್ಪಷ್ಟತೆ ಇರುವಲ್ಲಿ ಏನನ್ನೂ ಕೇಳುವ ಪ್ರಮೇಯವಿರುವುದಿಲ್ಲ; ಮಾತ್ರವಲ್ಲದೆ ಹೃದಯದ ಭಾರ ಇಳಿದಿರುತ್ತದೆ. ಪ್ರವೃತ್ತಿಜನ್ಯವಾಗಿ, ಕಷ್ಟಕಾಲದಲ್ಲಿ ಏನೋ ಒಂದು ಬಗೆಯ ಯಾಚನೆ ತುಟಿಗಳ ಮೇಲೆ ಬಂದು ಬಿಡುತ್ತದೆ. ಅದೂ ಕಷ್ಟಗಳ, ನೋವುಗಳ ನಿವಾರಣೆಗೆ ಅಥವಾ ಏನೋ ಒಂದು ಬಗೆಯ ಪ್ರಯೋಜನ ಪಡೆಯಲು ಅಂಥ ಯಾಚನೆ ಮಾಡಲಾಗುತ್ತದೆ. ಈ ನೆಲದ ದೇವರು ಅಥವಾ ಮನದೊಳಗೂ ದೇವರು ಯಾಚನೆಗೆ ತೃಪ್ತಿಕರ ಪರಿಹಾರ ನೀಡುವರೆಂಬ ಭರವಸೆಯಿದೆ. ಕೆಲವೊಮ್ಮೆ ಆಕಸ್ಮಿಕವಾಗಿ ಅಥವಾ ಏನೋ ಒಂದು ವಿಚಿತ್ರ ಯೋಗಾಯೋಗದಿಂದ ಪ್ರಾರ್ಥನೆಗೆ ಪರಿಹಾರ ದೊರೆಯುತ್ತದೆ. ದೇವರು ಪರಿಹಾರ ನೀಡಿದ್ದರಿಂದ ನಂಬಿಕೆಗೆ ಸಮರ್ಥನೆ ದೊರೆಯುತ್ತದೆ. ಮನುಷ್ಯನ ದೇವರುಗಳು, ಅಂದರೆ ನಿಜವಾದ ದೇವರುಗಳು ಸಮಾಧಾನ ಪಡಿಸಲು, ಆಶ್ರಯ ನೀಡಲು ಮತ್ತು ಮನುಷ್ಯನ ಎಲ್ಲ ಉದಾತ್ತ ಮತ್ತು ಕ್ಷುದ್ರ ಆಸೆಗಳನ್ನು ಈಡೇರಿಸಲು ಇದ್ದಾನೆ. ಇಂಥ ದೇವರುಗಳು ತುಂಬಾ ಇದ್ದಾರೆ, ಪ್ರತಿಯೊಂದು ಇಗರ್ಜಿ, ಮಂದಿರ ಮತ್ತು ಮಸೀದಿಗಳಲ್ಲಿ ಇದ್ದಾರೆ. ಈ ನೆಲದ ದೇವರುಗಳು ಸಾಕಷ್ಟು ಶಕ್ತಿವಂತರಾಗಿದ್ದು ತತ್‌ಕ್ಷಣವೇ ಲಭ್ಯರಿದ್ದಾರೆ. ಪ್ರತಿಯೊಂದು ರಾಜ್ಯದಲ್ಲೂ ಇಂಥ ದೇವರುಗಳಿದ್ದಾರೆ. ಆದರೆ ಮನುಷ್ಯ ನಾನಾ ಬಗೆಯ ಪ್ರಾರ್ಥನೆ ಮತ್ತು ಯಾಚನೆಗಳ ನಡುವೆಯೂ ನೋಯುತ್ತಲೇ ಇರುತ್ತಾನೆ. ಜ್ವಲಂತವಾದ ಅರಿವಿನ ಮೂಲಕ ಮಾತ್ರವೇ ದುಃಖ ಕೊನೆಯಾಗಬಹುದು. ಆದರೆ ಅನ್ಯವು ಸುಲಭವೂ ಆದರಣೀಯವೂ ಮತ್ತು ಕಡಿಮೆ ಬಯಸುವಂಥದ್ದೂ ಆಗಿದೆ. ದುಃಖವು ಮಿದುಳನ್ನು ಮತ್ತು ಮೈಯನ್ನು ಬಳಲಿಸಿ ಮಂಕುಗೊಳಿಸುತ್ತದೆ, ಅಸೂಕ್ಷ್ಮಗೊಳಿಸುತ್ತದೆ ಹಾಗೂ ದಣಿಸುತ್ತದೆ. ತಿಳಿಯುವಿಕೆಗೆ ಸ್ವಜ್ಞಾನ ಬೇಕು, ಅದು ಒಂದು ಗಳಿಗೆಯ ವ್ಯವಹಾರವಲ್ಲ; ತನ್ನ ಬಗ್ಗೆ ಕಲಿಯುವುದಕ್ಕೆ ಕೊನೆಯಿಲ್ಲ. ಅದರ ಚೆಲುವು ಮತ್ತು ಮಹತ್ತು ಇರುವುದೇ ಅದು ಅಂತ್ಯವಿಲ್ಲದ್ದು ಎಂಬುದರಲ್ಲಿ. ಆದರೆ ಸ್ವಜ್ಞಾನವು ಅನುಕ್ಷಣ ಆಗುವಂಥದ್ದು. ಈ ಸ್ವಜ್ಞಾನವು ಕೇವಲ ಕ್ರಿಯಾಶೀಲ ವರ್ತಮಾನದಲ್ಲಿದೆ; ಜ್ಞಾನದ ಹಾಗೆ ಅದಕ್ಕೆ ಸಾತತ್ಯವಿಲ್ಲ. ಯಾವುದಕ್ಕೆ ಸಾತತ್ಯ ಇದೆಯೋ ಅದು ಅಭ್ಯಾಸ; ಚಿಂತನೆಯ ಜಡವಾದ ಪ್ರಕ್ರಿಯೆ. ಅರ್ಥಮಾಡಿಕೊಳ್ಳುವುದಕ್ಕೆ ಸಾತತ್ಯ, ನಿರಂತರತೆ, ಮುಂದುವರಿಕೆ ಇಲ್ಲ.

ಕೃತಿ: ಕೃಷ್ಣಮೂರ್ತಿಯವರ ದೈನಿಕ ಭಾವಲಹರಿ
ಮೂಲ: **Krishnamurti's Note Book**
ಅನುವಾದ: ಮಹಾಬಲೇಶ್ವರ ರಾವ್

**ವಿನಮ್ರತೆಯೇ ಸಕಲ ಸದ್ಗುಣಸಾರ. ವಿನಮ್ರತೆಯನ್ನಾಗಲಿ, ಸದ್ಗುಣವನ್ನಾಗಲಿ ರೂಢಿಸುವ ಹಾಗಿಲ್ಲ. ನೈತಿಕತೆ ಎಂಬುದು ಸಾಮಾಜಿಕ ಪರಿಸರ ರೂಪಿಸಿದ ವಿನ್ಯಾಸಕ್ಕೆ ಹೊಂದಿಕೊಳ್ಳುವುದೇ ಆಗಿದೆ. ನಿರಾಕರಿಸುವುದು ಆವಶ್ಯಕ, ನಾಳೆ ಏನು ಒದಗುತ್ತದೆ ಎಂಬುದನ್ನು ಅರಿಯದೆ ವರ್ತಮಾನವನ್ನು ನಿರಾಕರಿಸುವುದು ಎಂದರೆ ಜಾಗೃತವಾಗಿರುವುದು.**



# ಚೆಲುವು ಕಾಲಾತೀತ



> ಆಲೋಚನೆ ಅಥವಾ ಭಾವನೆ ಅಥವಾ ಸಂಗೀತ ಕಛೇರಿ ಅಥವಾ ಒಂದು ಚಿತ್ರ ಅಥವಾ ಫುಟ್ಬಾಲ್ ಆಟದ ವೀಕ್ಷಣೆ ಉದ್ದೀಪಿಸಿದ ಭಾವನೆಗೂ ಚೆಲುವಿಗೂ ಸಂಬಂಧವಿಲ್ಲ. ಸಂಗೀತ ಕಛೇರಿ, ಕವನಗಳು ಒದಗಿಸಿದ ಸುಖ ಪ್ರಾಯಃ ಫುಟ್ಬಾಲ್ ಆಟದಿಂದ ಒದಗಿದ ಸುಖಕ್ಕಿಂತ ಸಂಸ್ಕಾರಯುತವಾದದ್ದು; ಆದರೆ ಅವೆಲ್ಲ ಇಗರ್ಜಿಯ ಮಾಸ್ ಅಥವಾ ದೇವಾಲಯದ ಪೂಜೆಯ ಹಾಗೆ ಒಂದೇ ಕ್ಷೇತ್ರಕ್ಕೆ ಸೇರಿದವುಗಳು. ಚೆಲುವು ಕಾಲಾತೀತವಾದ ಮತ್ತು ಚಿಂತನೆಯ ನೋವು ನಲಿವುಗಳಿಗೆ ಅತೀತವಾದುದು.
>
> ಜೆ ಕೃಷ್ಣಮೂರ್ತಿ

ಮಳೆಯ ವಾಸನೆ, ಎಲೆಗಳ ಸುಗಂಧ ಹಾಗೂ ಮಲ್ಲಿಗೆ ಹೂಗಳ ಸೆಳೆವ ಪರಿಮಳ ತುಂಬಿ ತಂಗಾಳಿ ಬೀಸುತ್ತಿದೆ. ಎಲ್ಲವೂ ನಿದ್ರೆಯಲ್ಲಿವೆ. ಪ್ರತಿ ಎಲೆಯೂ ನಿಶ್ಚಲ. ಬೆಳಗಿನ ಮತ್ತು ಮನುಷ್ಯನ ಚೆಲುವು, ನಿದ್ರಿಸುವ ಹಕ್ಕಿಗಳ ಚೆಲುವು, ಶುಷ್ಕವಾದ ನದಿ ದಡದ ಬಳಿಯ ತಾಜಾ ನೀರ ಸೆಲೆಯ ಚೆಲುವು. ಅದು ವ್ಯಕ್ತಿಗೆ ಸೇರಿದ್ದಲ್ಲ ಎಂಬುದು ಅದ್ಭುತವಾದ ವಿಷಯ. ಅದರಲ್ಲಿ ಏನೋ ನಿಗ್ರಹ ಗುಣವಿದೆ. ಅದು ಭಯ ಮತ್ತು ನಿರಾಕರಣದಿಂದ ಹುಟ್ಟಿಕೊಂಡ ಚಟುವಟಿಕೆಗಳಿಂದ ರೂಢಿಸಿದ್ದಲ್ಲ. ಆದರೆ ಪೂರ್ಣತೆಯ ನಿಗ್ರಹ, ಅದೆಷ್ಟು ಪೂರ್ಣವೆಂದರೆ ಅದಕ್ಕೆ ಭ್ರಷ್ಟತೆಯೇ ತಿಳಿದಿಲ್ಲ. ಏಕಾಂತದಲ್ಲಿ ಪಶ್ಚಿಮದ ದಿಗಂತದಲ್ಲಿ ಮಹಾವ್ಯಾಧ ತಾರೆ ಹೊಳೆಯುತ್ತಿರಲು, ಚೆಲುವಿನ ಉರಿ ಕಾಲದ ರಕ್ಷಣೆಗಳನ್ನು ಅಳಿಸಿ ಹಾಕಿತು. ಅಲ್ಲಿ ತಾರೆಗಳನ್ನು ಹೊತ್ತ ಬೆಳಗುವ ಆಗಸವನ್ನು ಮೌನವಹಿಸಿರುವ ಪೃಥ್ವಿಯನ್ನು ನೋಡುತ್ತ ಕಾಲದ ಮಿತಿಗಳನ್ನು ಮೀರಿ ಧ್ಯಾನಿಸುತ್ತಿರಲು, ಚೆಲುವು ಸುಖ ಅರಸುವಿಕೆಯ ವ್ಯಕ್ತಿಗತ ಯತ್ನ ಎಂದೆನಿಸಲಿಲ್ಲ, ಅದು ವಸ್ತುಗಳನ್ನು ಒಟ್ಟುಗೂಡಿಸಿದ್ದರಿಂದ, ಪರಿಚಿತ ವಸ್ತುಗಳಿಂದ ಅಥವಾ ತನ್ನ ಚಿಂತನೆ ಭಾವನೆ ಸಹಿತವಾದ ಮಿದುಳು ಸೃಷ್ಟಿಸಿದ ಅಜ್ಞಾತ ಬಿಂಬಗಳು ಮತ್ತು ದರ್ಶನಗಳಿಂದ ಆದುದು ಎಂದೆನಿಸಲಿಲ್ಲ. ಆಲೋಚನೆ ಅಥವಾ ಭಾವನೆ ಅಥವಾ ಸಂಗೀತ ಕಛೇರಿ ಅಥವಾ ಒಂದು ಚಿತ್ರ ಅಥವಾ ಫುಟ್ಬಾಲ್ ಆಟದ ವೀಕ್ಷಣೆ ಉದ್ದೀಪಿಸಿದ ಭಾವನೆಗೂ ಚೆಲುವಿಗೂ ಸಂಬಂಧವಿಲ್ಲ. ಸಂಗೀತ ಕಛೇರಿ, ಕವನಗಳು ಒದಗಿಸಿದ ಸುಖ ಪ್ರಾಯಃ ಫುಟ್ಬಾಲ್ ಆಟದಿಂದ ಒದಗಿದ ಸುಖಕ್ಕಿಂತ ಸಂಸ್ಕಾರಯುತವಾದದ್ದು; ಆದರೆ ಅವೆಲ್ಲ ಇಗರ್ಜಿಯ ಮಾಸ್ ಅಥವಾ ದೇವಾಲಯದ ಪೂಜೆಯ ಹಾಗೆ ಒಂದೇ ಕ್ಷೇತ್ರಕ್ಕೆ ಸೇರಿದವುಗಳು. ಚೆಲುವು ಕಾಲಾತೀತವಾದ ಮತ್ತು ಚಿಂತನೆಯ ನೋವು ನಲಿವುಗಳಿಗೆ ಅತೀತವಾದುದು.

---

ಕೃತಿ: ಕೃಷ್ಣಮೂರ್ತಿಯವರ ದೈನಿಕ ಭಾವಲಹರಿ
ಮೂಲ: **Krishnamurti's Note Book** Rishi Valley 6th Nov
ಅನುವಾದ: ಮಹಾಬಲೇಶ್ವರ ರಾವ್

# KEEP DISCONTENT ALIVE:ಅತೃಪ್ತಿಯನ್ನು ಜೀವಂತವಾಗಿಟ್ಟುಕೊಳ್ಳಿ

## 8 ರಿಂದ 11 ಜನವರಿ 2026 : ಶಿಬಿರ

ಈ ಮೂರುದಿನಗಳ ಶಿಬಿರದ ಆಶಯವು :

ಜೆ ಕೃಷ್ಣಮೂರ್ತಿಯವರ ಬೋಧನೆಗಳ ಬೆಳಕಿನಲ್ಲಿ: "ಅತೃಪ್ತಿಯನ್ನು ಜೀವಂತವಾಗಿಟ್ಟುಕೊಳ್ಳಿ" ವಿಷಯವನ್ನು ಸ್ವಾಧ್ಯಾಯ ಹಾಗೂ ಸಹ-ಅಧ್ಯಯನ ಚಟುವಟಿಕೆಗಳ ಮೂಲಕ ಶೋಧಿಸುವುದಾಗಿದೆ. ಈ ಶಿಬಿರವು ನೂರು ಎಕರೆ ವಿಸ್ತೀರ್ಣದ ಸೊಂಪಾದ ಹಸಿರು ವನದ ನೈಸರ್ಗಿಕ ಸೌಂದರ್ಯ ಹಾಗೂ ಪ್ರಶಾಂತ ಮೌನದ ವಾತಾವರಣದಲ್ಲಿ ನೆರವೇರುತ್ತದೆ. ಈ ಶಿಬಿರದ ಎಲ್ಲಾ ಚಟುವಟಿಕೆಗಳು ಮತ್ತು ಸಂವಾದಗಳು ಕನ್ನಡದಲ್ಲಿ ನಡೆಯಲಿವೆ. ಶಿಬಿರ ನಡೆಯುವ ಅಧ್ಯಯನ ಕೇಂದ್ರದಲ್ಲಿ ನಿಯಮಿತ ಸ್ಥಳಾವಕಾಶವಿರುವುದರಿಂದ, ಮೊದಲು ನೋಂದಾಯಿಸಿದ ಶಿಬಿರಾರ್ಥಿಗಳಿಗೆ ಆದ್ಯತೆಯಿರುತ್ತದೆ. ಶಿಬಿರಾರ್ಥಿಗಳು ದೂರವಾಣಿ ಅಥವಾ ಮಿಂಚಂಚೆ ಮೂಲಕ ನೋಂದಾಯಿಸಬಹುದು.

**ಸೂಚನೆ:**

ಶಿಬಿರಾರ್ಥಿಗಳು **8 ಜನವರಿ 2026** ನೇ ಗುರುವಾರ ಸಂಜೆ **6:00** ರಿಂದ **7:00** ಗಂಟೆಯೊಳಗೆ ಅಧ್ಯಯನ ಕೇಂದ್ರ ತಲುಪುವುದು ಅವಶ್ಯ. ಸಂಜೆ **6:00** ಕ್ಕೆ ರೇಷ್ಮೆ ಸಂಸ್ಥೆ ಮೇಟ್ರೋ ನಿಲ್ದಾಣದಿಂದ ಗುಂಪು ಸಾರಿಗೆ ವ್ಯವಸ್ಥೆ ಇರುತ್ತದೆ. ಪ್ರತಿ ಶಿಬಿರಾರ್ಥಿಗಳಿಗು ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಸರಳ ಸಸ್ಯಾಹಾರಿ ಊಟ ಉಪಹಾರ ವ್ಯವಸ್ಥೆ ಇರುತ್ತದೆ. ಶಿಬಿರದ ವೆಚ್ಚಗಳಿಗಾಗಿ ಸೂಚಿಸಿದ ಕೊಡುಗೆ: ತಲಾ (Sharing Cottage) **Rs.6,000/-** ಆಗಿದೆ. (Single Cottage): **Rs.7,500/-** ಮಾತ್ರ ಪಾವತಿಸಬಹುದು.

**ವಿಳಾಸ:**

ಅಧ್ಯಯನ ಕೇಂದ್ರ, ಬೆಂಗಳೂರು; ವ್ಯಾಲಿಶಾಲೆ ಆವರಣ,

17ನೇ ಕನಕಪುರ ರಸ್ತೆ,

ಪೋ: ತಾತಗುಣಿ, ಬೆಂಗಳುರು 560082

ದೂರವಾಣಿ: 9972995800

---

*"ಹೊರಗಿನ ಪ್ರಪಂಚದಲ್ಲಿ ವ್ಯವಸ್ಥೆ ಇರಬೇಕಾದರೆ ಅಂತರಂಗದಲ್ಲಿ ಆ ವ್ಯವಸ್ಥೆ ಇರಬೇಕು ಎಂದು ನಾವು ಯಾವತ್ತೂ ಮನಗಂಡಿಲ್ಲ. ನಮ್ಮ ಸುತ್ತಲಿನ ಜಗತ್ತನ್ನು ಮೊದಲು ಶಾಂತಗೊಳಿಸುವುದಲ್ಲ; ನಮ್ಮದೇ ಮನೆಯನ್ನು ಮೊದಲಿಗೆ ಸ್ವಚ್ಛವಾಗಿಡೋಣ."*

***Where Can Peace Be Found – J Krishnamurti***

# RETREAT SCHEDULE

| | | |
|---|---|---|
| Dec 11 - 14 | | Silence, Stillness, Meditation |
| Jan 15 - 18 | | Significance of Living in the Here and Now in daily life |
| Feb 12 - 15 | | Why do I resist change? |



ಭದ್ರತೆ ಎಂಬುದಿದೆಯಾ? ಮನುಷ್ಯ ಉದ್ದಕ್ಕೂ ಬಯಸುತ್ತಾ ಬಂದಿರುವ ಚಿರಂತನತೆ ಅಮರತ್ವ ಎಂಬುದಿದೆಯಾ? ನೀವೇ ಸ್ವತಃ ಗಮನಿಸುವ ಹಾಗೆ, ನಿಮ್ಮ ದೇಹ ಆಗಾಗ್ಗೆ ಬದಲಾಗುತ್ತದೆ. ನೀವೇ ಗಮನಿಸುವ ಹಾಗೆ ನಿಮ್ಮ ಹೆಂಡತಿ, ಮಕ್ಕಳು, ನೆರೆಹೊರೆಯವರು, ನಿಮ್ಮ ಪ್ರಭುತ್ವ, ನಿಮ್ಮ ಸಮುದಾಯದದ ಜತೆಗಿನ ನಿಮ್ಮ ಸಂಬಂಧಗಳಲ್ಲಿ ಶಾಶ್ವತ ಎನ್ನುವಂಥದ್ದೇನಾದರೂ ಇದೆಯಾ? ನೀವು ಅದನ್ನು ಶಾಶ್ವತಗೊಳಿಸಲು ಬಯಸುತ್ತೀರಿ. ನಿಮ್ಮ ಹೆಂಡತಿಯ ಜತೆಗಿನ ಸಂಬಂಧ-ನೀವು ಅದನ್ನು ಮದುವೆ ಎಂದು ಕರೆಯುತ್ತೀರಿ ಮತ್ತು ಕಾನೂನುಬದ್ಧವಾಗಿ ಅದನ್ನು ಬಿಗಿಯಾಗಿಟ್ಟುಕೊಳ್ಳುತ್ತೀರಿ. ಆದರೆ ಈ ಸಂಬಂಧದಲ್ಲಿ ಶಾಶ್ವತತೆ ಇದೆಯಾ? ಏಕೆಂದರೆ ನೀವು ನಿಮ್ಮ ಪತ್ನಿ ಅಥವಾ ಪತಿಯನ್ನು ಶಾಶ್ವತ ಎಂದು ಭಾವಿಸಿದ್ದರೆ ಆಕೆ ನಿಮ್ಮಿಂದ ದೂರ ಹೋದರೆ ಅಥವಾ ಬೇರೊಬ್ಬನಲ್ಲಿ ಒಲವು ತೋರಿದರೆ ಅಥವಾ ತೀರಿಕೊಂಡರೆ ಅಥವಾ ಕಾಯಿಲೆ ಬಂದರೆ, ನೀವು ಪೂರ್ತಿಯಾಗಿ ಕಳೆದುಹೋಗುತ್ತೀರಿ. ನೀವು ಹೊಟ್ಟೆಕಿಚ್ಚು ಪಡುತ್ತೀರಿ, ಭಯಪಡುತ್ತೀರಿ, ದೇವಾಲಯಗಳಿಗೆ ಓಡುತ್ತೀರಿ, ಪೂಜೆ ಮಾಡಿಸುತ್ತೀರಿ, ಎಲ್ಲಾ ತರದ ಅಸಂಬದ್ಧಗಳನ್ನು ಆಹ್ವಾನಿಸುತ್ತೀರಿ.

ಜೆ ಕೃಷ್ಣಮೂರ್ತಿ


**Teachings of life:** Is there such a thing as security?

# ಬದುಕುವುದು ಮತ್ತು ಸಾಯುವುದು ಎರಡೂ ಒಂದೇ

ನಿತ್ಯವೂ ನೀಲಗಗನವನ್ನು ನೋಡುವುದು, ಎಲೆಯ ಮೇಲೆ ಕುಳಿತ ಮಿಡತೆಯನ್ನು ನೋಡುವುದು ಎಂಬ ಹಾಗೆ ಹೇಳಿಕೊಡಿ. ಮಕ್ಕಳಿಗೆ ಹಲ್ಲು ಹುಟ್ಟುವಾಗ ಏನೆಲ್ಲ ತೊಂದರೆ ಆಗುತ್ತದೆ ಹಾಗೆ, ಅದೆಲ್ಲದರ ರಗಳೆಗಳೆಂಬಂತೆ ಹೇಳಿಕೊಡಬೇಕು. ಮಕ್ಕಳಲ್ಲಿ ಅಸಾಧಾರಣವಾದ ಕುತೂಹಲವಿರುತ್ತದೆ. ನೀವು ಸಾವಿನ ಆ ಸ್ವಭಾವವನ್ನು ತಿಳಿದರೆ, ಪ್ರತಿಯೊಬ್ಬರೂ ಸಾಯುತ್ತಾರೆ ಎಂದು ವಿವರಿಸಬೇಕಾಗಿಲ್ಲ. ಮಣ್ಣೊಡನೆ ಮಣ್ಣಾಗುತ್ತೇವೆ ಎಂದೆಲ್ಲ ಹೇಳಬೇಕಾಗಿಲ್ಲ. ಬದಲಾಗಿ ನಿರ್ಭಯವಾಗಿ ಅದನ್ನು ಗಂಭೀರವಾಗಿ ಮಕ್ಕಳಿಗೆ ವಿವರಿಸುತ್ತೀರಿ. ಬದುಕುವುದು ಮತ್ತು ಸಾಯುವುದು ಎರಡೂ ಒಂದೇ ಎಂಬ ಭಾವವನ್ನು ಅವರಲ್ಲಿ ಬೆಳೆಸುತ್ತೀರಿ...

ಪುನರುತ್ಥಾನವಿಲ್ಲ, ಅದೊಂದು ಮೂಢನಂಬಿಕೆ, ಮತಶ್ರದ್ಧೆಯ ನಂಬಿಕೆ. ಈ ಪೃಥ್ವಿಯ ಮೇಲಿನ ಸಕಲವೂ ಈ ಸುಂದರ ಭೂಮಿಯ ಮೇಲಿನ ಎಲ್ಲವೂ ಬದುಕುತ್ತವೆ, ಸಾಯುತ್ತವೆ, ಮೂಡುತ್ತವೆ, ಮುದುಡುತ್ತವೆ, ಉದುರುತ್ತವೆ. ಜೀವನದ ಒಟ್ಟು ಚಲನೆಯನ್ನು ಗ್ರಹಿಸಲು ಧೀಶಕ್ತಿ ಬೇಕು; ಅದು ಚಿಂತನೆಯ, ಗ್ರಂಥಗಳ ಅಥವಾ ಜ್ಞಾನದಿಂದ ಉಗಮಿಸಿದ ಬುದ್ಧಿಯಲ್ಲ. ಅದು ಪ್ರೇಮ, ಕರುಣೆ ಮತ್ತು ಸಂವೇದನಾಶೀಲತೆಯಿಂದ ಪುಟಿದ ಧೀಶಕ್ತಿ... ಆ ಒಣಗಿದ ಎಲೆಯನ್ನು ಅದರ ಚೆಲುವು ಹಾಗೂ ಬಣ್ಣಸಹಿತ ನೋಡಿದಾಗ ನಮ್ಮ ಸಾವು ಹೀಗಿರಬಹುದು, ಅದು ಅಂತ್ಯದಲ್ಲಿಲ್ಲ ಆರಂಭದಲ್ಲಿದೆ ಎಂಬುದನ್ನು ನಾವು ಗಾಢವಾಗಿ ಗ್ರಹಿಸಬಹುದು. ಅದರ ಬಗ್ಗೆ ಜಾಗೃತರಾಗಬಹುದು. ಸಾವು ಭಯಾನಕವಲ್ಲ, ಅದು ನಿವಾರಣೆ ಮಾಡುವಂಥದ್ದಲ್ಲ, ಮುಂದೂಡುವಂಥದ್ದಲ್ಲ. ಅದು ನಿತ್ಯವೂ ನಮ್ಮ ಜತೆ ಇರುವಂಥದ್ದು. ಈ ಅರಿವಿನಿಂದ ಅಪ್ರಮೇಯದ ಅಸಾಧಾರಣ ಪ್ರಜ್ಞೆ ಒಡಮೂಡುತ್ತದೆ.

THE LIFE AND DEATH OF KRISHNAMURTI



ಯಥಾರ್ಥ ನನಗೆ ತಿಳಿದಿಲ್ಲದಿದ್ದರೆ, ಅದನ್ನು ನಾನು ಹೇಗೆ ಹುಡುಕ ಬಲ್ಲೆ? ಅದು ತಾನಾಗಿಯೇ ಬರಬೇಕೆಂಬುದು ಖಂಡಿತವಾದಂತಾಯಿತು; ನಾನು ಅದನ್ನು ಹುಡುಕಿಕೊಂಡು ಹೋಗಲು ಸಾಧ್ಯವಿಲ್ಲ. ನಾನು ಅದನ್ನು ಹುಡುಕಿಕೊಂಡು ಹೋದಲ್ಲಿ, ನನ್ನಿಂದ ಪ್ರಕ್ಷೇಪಿಸಲ್ಪಟ್ಟ, ನನಗೆ ತಿಳಿದಿರುವ ಯಾವುದೋ ಒಂದು ವಿಷಯ ಅಥವಾವಸ್ತುವನ್ನು ಹುಡುಕಿಕೊಂಡು ಹೋಗುತ್ತಿದ್ದೇನೆ, ಅಷ್ಟೇ.

ಜೆ ಕೃಷ್ಣಮೂರ್ತಿ

ನಾನು ಶಿಸ್ತಿನ ಬಗ್ಗೆ ಸಾಕಷ್ಟು ಮಾತನಾಡಿದ್ದೇನೆ. ಆದರೆ, ಶಿಸ್ತು ಎಂದರೇನು, ಹಾಗು ಅದು ನನಗೆ ಏಕೆ ಬೇಕು ಎಂದು ನನಗೆ ಆಶ್ಚರ್ಯವಾಗುತ್ತದೆ. ನಿಜವಾಗಿಯೂ ಆಳವಾದ ವ್ಯಕ್ತಿತ್ವವುಳ್ಳ, ಬಲಿಷ್ಠ ವ್ಯಕ್ತಿಯೊಬ್ಬ ಶಿಸ್ತನ್ನು ಏಕೆ ಪಾಲಿಸಬೇಕು? ಅವನ ಆ ಅಗಾಧವಾದ ಶಕ್ತಿ ಮತ್ತು ಆಳವಾದ ವ್ಯಕ್ತಿತ್ವವೇ ಸ್ವತಃ ಶಿಸ್ತಾಗಿರುತ್ತದೆ. ಅವನಿಗೆ ಅನುಮೋದನೆಗಳ ಹಾಗೂ ಪ್ರತಿ-ಅನುಮೋದನೆಗಳ ಅಗತ್ಯವಿಲ್ಲ.  ಆ ಅಗಾಧವಾದ ಶಕ್ತಿಯೇ ದಡಗಳನ್ನು ಸೃಷ್ಟಿಸುತ್ತಿದೆ. ನಮ್ಮೊಳಗಿರುವ ಅದನ್ನು ನಾವು ನಾಶಪಡಿಸಿದ್ದೇವೆ, ಆದ್ದರಿಂದ ನಾವು ಮಕ್ಕಳನ್ನು ನಾಶಪಡಿಸುತ್ತಿದ್ದೇವೆ. ಬಹಳ ಮಹತ್ವಾಕಾಂಕ್ಷಿಯಾದ ಒಬ್ಬ ವ್ಯಕ್ತಿಯಲ್ಲಿ, ಆತನ ಮಹತ್ವಾಕಾಂಕ್ಷೆಯೇ ಆತನನ್ನು ಶಿಸ್ತುಬದ್ಧಗೊಳಿಸುತ್ತದೆ.



ಅವನು ‘ನನ್ನನ್ನು ನಾನು ಶಿಸ್ತುಬದ್ಧಗೊಳಿಸಿಕೊಳ್ಳುತ್ತಿದ್ದೇನೆ', ಎಂದು ಹೇಳುವುದಿಲ್ಲ. ಅವನು, 'ನಾನು ತುಂಬಾ ಶ್ರೀಮಂತನಾಗಬೇಕು, ನಾನು ಆರು ಗಂಟೆಗೆ ಏಳಬೇಕು', ಎಂದು ಹೇಳುತ್ತಾನೆ. ಆ ಸಾಧಿಸಬೇಕೆಂಬ ತೀವ್ರವಾದ ಬಯಕೆಯೇ ಅವನನ್ನು ಶಿಸ್ತಿಗೆ ಒಳಪಡಿಸುತ್ತದೆ. ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಯು ತನ್ನ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸಲು ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ನೀವು, 'ಶಿಸ್ತು ಮತ್ತು ಸ್ವಾತಂತ್ರ್ಯದ ಬಗ್ಗೆ ಸಂವಾದಿಸೋಣ' ಎಂದು ಹೇಳಿದಾಗ ಯಾರನ್ನು ಶಿಸ್ತುಬದ್ಧಗೊಳಿಸಬೇಕು ಮತ್ತು ಯಾವುದರ ಕುರಿತಂತೆ ಶಿಸ್ತುಬದ್ಧಗೊಳಿಸಬೇಕು? ಶಕ್ತಿಯು ತನ್ನದೇ ಆದ ಶಿಸ್ತನ್ನು ಸೃಷ್ಟಿಸುವುದಿಲ್ಲವೇ?

SCHOOL WITHOUT FEAR

**ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ "What are you doing with your life?" ವಿಷಯದ ಚರ್ಚೆ ಮತ್ತು ಸಂವಾದ:**


ಮಂಗಳೂರು, ಅಗಸ್ಟ್ 9th ಬೆಸೆಂಟ್ ಮಹಿಳಾ ಕಾಲೇಜಿನ ಮಾನವ ಸಂಪನ್ಮೂಲ ಅಭಿವೃದ್ಧಿ ಘಟಕ ಆಯೋಜಿಸಿದ್ದ "What are you doing with your life?" ಎಂಬ ವಿಷಯದ ಸಂವಾದ ಕಾರ್ಯಕ್ರಮದಲ್ಲಿ ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ, ಬೆಂಗಳೂರು ಇವರ ಸ್ವಯಂಸೇವಕ ಸಹೋದ್ಯೋಗಿ ಡಾ. ರಾಜಾರಾಮ್ ಕುಡ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು.

ಈ ಸಂವಾದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆಳವಾದ ಪ್ರಭಾವ ಬೀರಿದವು ಎಂದು ಕಾಲೇಜು ಪ್ರಾಂಶುಪಾಲರು ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ನೂರು ವಿದ್ಯಾರ್ಥಿಗಳು, ಐದು ಮುಖ್ಯ ಶಿಕ್ಷಕರು ಹಾಗೂ ಪ್ರಾಂಶುಪಾಲರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಹಲವು ಪುಸ್ತಕಗಳನ್ನು ಕಾಲೇಜಿನ ಗ್ರಂಥಾಲಯಕ್ಕೆ ನೀಡಲಾಯಿತು, ಪ್ರಾಂಶುಪಾಲರು ಅಭಿನಂದನೆ ಸಲ್ಲಿಸಿದರು ಹಾಗೂ ಮುಂದಿನ ದಿನಗಳಲ್ಲಿ ಸಹಯೋಗ ಮುಂದುವರೆಯಲಿ ಎಂಬ ಆಶಯ ವ್ಯಕ್ತಪಡಿಸಿದರು.

---

**ನಿಮ್ಮಅಪೇಕ್ಷೆಗಳು ಸಮಾಜದ ಸ್ವೀಕೃತ ವಿನ್ಯಾಸಗಳಿಗೆ ಹೊಂದಿ ಕೊಳ್ಳುವ ತನಕ ನೀವು ಗೌರವಪಾತ್ರ ನಾಗರಿಕರು. ಆ ವಿನ್ಯಾಸಗಳಿಗೆ ಬಾಹಿರವಾದ ಸಮಗ್ರ ಹಂಬಲವು ಮೂಡಿದ ಮರುಕ್ಷಣವೇ ನೀವು ಅಪಾಯಕರ, ಆದ್ದರಿಂದಲೇ ಸಮಾಜವು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿರುತ್ತದೆ. ನಿಮ್ಮ ಸಮಗ್ರ ಅಸ್ತಿತ್ವದ ಅಭಿವ್ಯಕ್ತಿಯಾಗಿ, ನಿಮ್ಮನ್ನು ಕ್ರಾಂತಿಕಾರಿ ಕ್ರಿಯೆಯ ಕಡೆಗೆ ಕರೆದೊಯ್ಯುವ ಹಂಬಲವು ಮೂಡದಂತೆ ನೋಡಿಕೊಳ್ಳುವುದೇ ಅದರ ಗುರಿ.**

THINK ON THIS THINGS -J KRISHNAMURTI




---

*ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು 20% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು 40% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- * KFI ಪ್ರಕಟಿತ ಕನ್ನಡ ಪುಸ್ತಕಗಳು 60% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.



**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್

**Published by:**
Editor: Arun N Haunshi
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org